ಓ.ಎಸ್.ನಂ.5/2022
ಪಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 22.03.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 3, 7 ಮತ್ತು 8 ಪರ ಶ್ರೀ B.G.R.ವಕೀಲರಿಂದ.**

ನಾನು ಶಾಲೆ ಕಲಿತಿರುವುದಿಲ್ಲ. ನಾನು ಸಹಿ ಮಾಡುವುದನ್ನು ಕಲಿತಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರಿಗೆ ಹೇಳಿ ನಾನೇ ಬರೆಸಿರುತ್ತೇನೆ. ದಾವೆಯನ್ನು 8 ಐ ಟಂ ಗಳಿಗೆ ಸಂಬಂದಿಸಿದಂತೆ ದಾಖಲು ಮಾಡಿರುತ್ತೇನೆ. ಅವುಗಳ ಸರ್ವೆನಂ, ಚಕ್ಕುಬಂದಿ ಮತ್ತು ವಿಸ್ತೀರ್ಣ ಹೇಳಲು ಬರುವುದಿಲ್ಲ. ನನ್ನ ಹೆಂಡತಿಯ ಹೆಸರು ತಾಯಮ್ಮಾ. ನನ್ನ ಮತ್ತು ಅವರ ಮದುವೆ ಆಗಿ25 ವರ್ಷಗಳಾಗಿರಬಹುದು. ಅವರು ಆಡೋನಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಹೋಗಿ ಬಂದು ಮಾಡುತ್ತಿದ್ದರು ಎಂದು ಹೇಳುತ್ತಾರೆ.

ತಾಯಮ್ಮಾ ಅವರ ತವರು ಮನೆ ಅಂಚೆಪಾಳ್ಯ ಆಗಿರುತ್ತದೆ. ನನ್ನ ಮತ್ತು ತಾಯಮ್ಮಾ ಅವರ ಮದುವೆಯನ್ನು ಸಿದ್ದಲಿಂಗಯ್ಯ ಮತ್ತು ರಂಗಮ್ಮಾ ಅವರು ನಿಂತು ಮಾಡಿರುತ್ತಾರೆ. ಸಿದ್ದಲಿಂಗಯ್ಯ (ನನ್ನ ಮಾವ) ಅವರಿಗೆ 7 ಜನ ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳು ಯಾರು ಇರುವುದಿಲ್ಲ. ಸಿದ್ದಲಿಂಗಯ್ಯ ಅವರು ಅಂಚೆಪಾಳ್ಯದಲ್ಲಿ ಜೀವಿತ ಅವಧಿಯವರೆಗೂ ವಾಸ ಮಾಡುತ್ತಿದ್ದರು. ನನ್ನ ಹೆಂಡತಿ ಮರಣ ಹೊಂದಿ ಸುಮಾರು 25 ವರ್ಷಗಳಾಗಿರಬಹುದು ನನಗೆ ನೆನಪಿಲ್ಲ.

ಆಡೋನಹಳ್ಳಿಯಿಂದ ಅಂಚೆಪಾಳ್ಯ 15 ಕೀ ಮೀ ದೂರದಲ್ಲಿದೆ. ಸಿದ್ದಲಿಂಗಯ್ಯ ಅವರ ಜೀವಿತ ಅವಧಿಯಲ್ಲಿ ನಾನು ಆಗಾಗ್ಗೆ ಹೋಗಿ ಅವರನ್ನು ಮಾತನಾಡಿಸಿಕೊಂಡು ಬರುತ್ತಿದ್ದೇ ಎಂದರೆ ಸರಿ. ನಾನು ಆಗಾಗ್ಗೆ ಹೋಗುವಾಗ ನನ್ನ ಮಾವ ಸಿದ್ದಲಿಂಗಯ್ಯ ಅವರು ಅವರ ಕಷ್ಟ ಸುಖಗಳನ್ನು ನನ್ನ ಬಳಿ ಹೇಳುತ್ತಿದ್ದರು ಮತ್ತು ನನ್ನ ಕಷ್ಟ ಸುಖಗಳನ್ನು ಸಹ ನಾನು ಹೇಳಿಕೊಳ್ಳುತ್ತಿದ್ದೆ. ನನ್ನ ಮಾವ ಮರಣ ಹೊಂದುವವರೆಗೆ ನಾವು ಹೋದಾಗಲೆಲ್ಲಾ ಚನ್ನಾಗಿ ಮಾತನಾಡಿಸಿ ಕಳುಹಿಸಿಸುತ್ತಿದ್ದರು ಎಂದರೆ ಸರಿ.

ಸಿದ್ದಲಿಂಗಯ್ಯ ಅವರು ಮರಣ ಹೊಂದುವವರೆಗೆ ವ್ಯವಸಾಯ ಮಾಡುತ್ತಿದ್ದರು. ಅವರು ಮರಣ ಹೊಂದುವವರೆಗೆ ನಮ್ಮನ್ನು ಜಮೀನಿನ ಬಳಿ ಕರೆದುಕೊಂಡು ಹೋಗುತ್ತಿದ್ದರು. ಸಿದ್ದಲಿಂಗಯ್ಯ ಅವರು ಮರಣ ಹೊಂದುವವರೆಗೆ ತಮ್ಮ ದಿನನಿತ್ಯದ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾನು ಹೋದಾಗಲೆಲ್ಲಾ ಅವರು ಮರಣ ಹೊಂದುವವರೆಗೆ ಜೊತೆಯಲ್ಲಿಯೇ ಊಟ ತಿಂಡಿಯನ್ನು ಮಾಡುತ್ತಿದ್ದರು. ನನ್ನ ಹೆಂಡತಿ ಮರಣ ಹೊಂದಿದ ಎಷ್ಟು ವರ್ಷಗಳ ನಂತರ ನನ್ನ ಮಾವ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ಹೇಳುತ್ತಾರೆ.

ನನ್ನ ಹೆಂಡತಿ ಮರಣ ಹೊಂದಿದಾಗ ನನ್ನ ಮಾವ ಸಿದ್ದಲಿಂಗಯ್ಯ ಅವರು ಇನ್ನು ಬದುಕಿದ್ದರು. ಸಿದ್ದಲಿಂಗಯ್ಯ ಅವರು ಮೊದಲು ಮರಣ ಹೊಂದಿದ್ದು ನಂತರ ರಂಗಮ್ಮಾ ಅವರು ಮರಣ ಹೊಂದಿರುತ್ತಾರೆ. ನನ್ನ ಮಾವ ಮರಣ ಹೊಂದಿದ ಸಮಯದಲ್ಲಿ ಅವರ ವಯಸ್ಸು 80 ಆಗಿರಬಹುದು. ನನ್ನ ಮಾವ ಅವರ ಆಸ್ತಿಗೆ ಸಂಬಂಧಪಟ್ಟಂತೆ ತಾವು ಮಾಡಿದ ದಾಖಲೆಗಳ ಬಗ್ಗೆ ನನಗೆ ಹೇಳಿರುವುದಿಲ್ಲ.

ದಾವಾ ಸ್ವತ್ತುಗಳು ಮೊದಲು ರೇವಣ್ಣಗೌಡ ಅವರಿಗೆ ಸೇರಿದ್ದವು. ದಾವಾ ಸ್ವತ್ತು ರೇವಣ್ಣಗೌಡ ಅವರಿಗೆ ಸೇರಿದ್ದವು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಸಿಡಿರುವುದಿಲ್ಲ. ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ರೇವಣ್ಣಗೌಡ ಅವರಿಗೆ ಇರಲಿಲ್ಲ. ಸಿದ್ದಲಿಂಗಯ್ಯ ಅವರು ಮರಣ ಹೊಂದಿದ ಎಷ್ಟು ವರ್ಷಗಳ ಮೊದಲು ಅವರು ಮಾಡಿರುವ ವಿಲ್ ಬಗ್ಗೆ ನಿಮಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ 7-8 ವರ್ಷಗಳ ಮೊದಲೇ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ವಿಲ್ ನ ಬಗ್ಗೆ ನಿಮಗೆ ಯಾರು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಸೇಕ್ರೇಟರಿಯವರು ಕೇಸ ದಾಖಲು ಮಾಡಿದ ನಂತರ ತಿಳಿಸಿರುತ್ತಾರೆ. ಸಿದ್ದಲಿಂಗಯ್ಯ ಅವರು ಮರಣ ಹೊಂದುವ ಎಷ್ಟು ವರ್ಷ ಮೊದಲು ವಿಲ್ ಮಾಡಿದ್ದರು ಎಂದರೆ ಸಾಕ್ಷಿ 7-8 ವರ್ಷಗಳಲ್ಲಿ ಮರಣ ಹೊಂದಿರುತ್ತಾರೆಂದು ಹೇಳುತ್ತಾರೆ.

ವಿಲ್ ಅನ್ನು ನಾನು ವಕೀಲರಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ವಿಲ್ ಆದ ಎಷ್ಟು ವರ್ಷಕ್ಕೆ ನೀವು ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ 7-8 ವರ್ಷಕ್ಕೆ ತಿಳಿದುಕೊಂಡಿರುತ್ತೇನೆಂದು ಹೇಳುತ್ತಾರೆ. ವಿಲ್ ನಲ್ಲಿ ಬರೆದ ಅಂಶಗಳು ಸತ್ಯವಾಗಿರುತ್ತದೆ. ವಿಲ್ ನಲ್ಲಿ ನನ್ನ ಹೆಂಡತಿ ತಾಯಮ್ಮಾ ಅವರಿಗೆ ಆಸ್ತಿಗಳನ್ನು ನೀಡಿದ್ದಾರೆ ಎಂದರೆ ಸಾಕ್ಷಿ ಯಾವುದೇ ಆಸ್ತಿಗಳನ್ನು ನೀಡಿಲ್ಲವೆಂದು ಹೇಳುತ್ತಾರೆ.

ವಿಲ್ ನಲ್ಲಿ ಆಸ್ತಿಗಳು ಯಾರಿಗೆ ಕೊಟ್ಟಿದ್ದಾರೆ ಎಂದರೆಸಾಕ್ಷಿ ಹೆಣ್ಣು ಮಕ್ಕಳಿಗೆ ಸುಳ್ಳು ಸುಳ್ಳಾಗಿ ಬರೆಸಿಕೊಂಡಿರುತ್ತಾರೆಂದು ಹೇಳುತ್ತಾರೆ.

ಈ ಹಂತದಲ್ಲಿ ವಾದಿ ಪರ ವಕೀಲರು ಪ್ರತಿವಾದಿ ಪರ ವಕೀಲರು ಕೇಳುವ ಎಲ್ಲಾ ಪ್ರಶ್ನೆಗಳಿಗೆ ತಕರಾರು ತಗೆಯುತ್ತಿದ್ದು **ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್